ಮೇಲೂ ವಸತಿ ಗೃಹಗಳನ್ನು ನಿರ್ಮಿಸಿರುವುದು ಕಂಡುಬಂದಿರುತ್ತದೆ. ಅಂತಹ ಕಟ್ಟಡ ನಿರ್ಮಾಣಗಳನ್ನು ತಡೆಹಿಡಿಯಲಾಗಿದೆ.

ರಾಜ್ಯದಲ್ಲಿ ಕುಡಿಯುವ ನೀರಿನ ಪೂರೈಕೆ ಕಾಮಗಾರಿಗಳಿಗೆ ನೇರ ಗುತ್ತಿಗೆ ನೀಡಿರುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 120(508)

ಸದಸ್ಯರ ಹೆಸರು: ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು(ಶಿವಾಜಿನಗರ)

ಉತ್ತರಿಸುವ ಸಚಿವರು: ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಯವರು)

ಪ್ರಶ್ನೆ

1. ರಾಜ್ಯದಲ್ಲಿ ಟೆಂಡರ್ ಕರೆಯದೆ ಏಳು ಕುಡಿಯುವ ನೀರಿನ ಪೂರೈಕೆ ಕಾಮಗಾರಿಗಳಿಗೆ ನೇರ ಗುತ್ತಿಗೆ ನೀಡಿರುವುದು ನಿಜವಲ್ಲವೇ?

2. ಹಾಗಿದ್ದಲ್ಲಿ ಈ ಎಲ್ಲಾ ಕುಡಿಯುವ ನೀರಿನ ಪೂರೈಕೆ ಕಾಮಗಾರಿಗಳ ಅಂದಾಜು ವೆಚ್ಚವೆಷ್ಟು?

3. ಈ ರೀತಿ ಟೆಂಡರ್ ಕರೆಯದೇ ನೇರ ಗುತ್ತಿಗೆ ನೀಡಲು ಕಾರಣಗಳೇನು?

ಉತ್ತರ

1. ಇಲ್ಲ. ಕೇವಲ 3 ಕಾಮಗಾಂಗಳನ್ನು ಮಾತ್ರ ಸರ್ಕಾರದ ಪಾರದರ್ಶಕ ಸಾರ್ವಜನಿಕ ಸಂಗ್ರಹಣ ಶಾಸನ ಜಾರಿಗೆ ಬರುವುದಕ್ಕೆ ಮುಂಚೆ ನೇರವಾಗಿ ಭಾರತ ಸರ್ಕಾರದ ಸ್ವಾಮ್ಯದ ಸಂಸ್ಥೆಗಳಿಗೆ ವಹಿಸಲಾಗಿದೆ.

2. ಮೂರು ಕಾಮಗಾರಿಗಳ ಒಟ್ಟು ಮೊತ್ತ ರೂ.17.696 ಕೋಟಿಗಳು.

3. ಬಳ್ಳಾರಿ ಲಿಂಗಸೂಗುರು ಮತ್ತು ಅಣ್ಣಿಗೇರಿ ನೀರು ಸರಬರಾಜು ಯೋಜನೆಗಳಲ್ಲಿ ನೀರು ಸಂಗ್ರಹಣ ಟ್ಯಾಂಕುಗಳ ನಿರ್ಮಾಣ ಕಾಮಗಾರಿಗಳನ್ನು ಟೆಂಡರ್ ಕರೆದು ವಹಿಸಲು ಹೆಚ್ಚು ಕಾಲಾವಕಾಶ ಬೇಕಾದ್ದುದರಿಂದ ಈ ಟ್ಯಾಂಕುಗಳ ನಿರ್ಮಾಣ ಕಾಮಗಾರಿಗಳನ್ನು ಜಾಗ್ರತೆ ಮುಗಿಸುವ ದೃಷ್ಟಿಯಿಂದ ಕೇಂದ್ರ ಸರ್ಕಾರ ಸ್ವಾಮ್ಯದ ಮೆ:ಹೆಚ್.ಎಸ್.ಸಿ.ಎಲ್. ಸಂಸ್ಥೆಗೆ ನೇರವಾಗಿ ವಹಿಸಲಾಗಿದೆ.